**ಕರ್ನಾಟಕ ಸರ್ಕಾರ**

ಸಂಖ್ಯೆ:ಸಾಉಇ 16 ಎ ಆರ್ ಯು 2019(ಭಾ)

ಸಾರ್ವಜನಿಕ ಉದ್ದಿಮೆಗಳ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-01. ದಿನಾಂಕ:30.11.2020.

ಇವರಿಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಸಾರ್ವಜನಿಕ ಉದ್ದಿಮೆಗಳ ಇಲಾಖೆ

ಇವರಿಗೆ:
ಅಪರ ಮುಖ್ಯ ಮೌಲ್ಯಮಾಪನಾಧಿಕಾರಿ,
ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ,
ಬೆಂಗಳೂರು-560001.

ಮಾನ್ಯರೆ,

**ವಿಷಯ:** ಮೌಲ್ಯಮಾಪನಾ ಅಧ್ಯಯನಗಳ ಶಿಫಾರಸುಗಳ ಮೇಲೆ ಕೈಗೊಂಡ ವರದಿಗಳ ಬಗ್ಗೆ.

**ಉಲ್ಲೇಖ:** 1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ & ಸಾಂಖ್ಯಿಕ ಇಲಾಖೆರವರ ಅ.ಸ.ಪತ್ರ ಸಂ.ಕೆಇಎ 11 ಪಿಆರ್‌ಓಸಿ 2019 ದಿನಾಂಕ:20/08/2020.

2. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ರವರ ಪತ್ರ ಸಂ.ಕೆಇಎ 51 ಎಟಿಆರ್ 2019 ದಿನಾಂಕ:13/11/2020.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರಗಳಲ್ಲಿ ಕೋರಿರುವಂತೆ, 2016-17ನೇ ಸಾಲಿನಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಮೈಸೂರು ಸಕ್ಕರೆ ಕಂಪನಿ ನಿಯಮಿತ ಹಾಗೂ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತಗಳ ಮೌಲ್ಯಮಾಪನವನ್ನು ಕೈಗೊಂಡು ನೀಡಿರುವ ಶಿಫಾರಸುಗಳ ಮೇಲೆ ಕೈಗೊಂಡ ಕ್ರಮಗಳ ಅನುಸರಣಾ ವರದಿಯನ್ನು ಈ ಪತ್ರಕ್ಕೆ ಲಗತ್ತಿಸಿ, ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ
ಸ್ವೀಕೃತಿ ಸಂಖ್ಯೆ 616/10
ದಿನಾಂಕ 01/12/2020
ಗಣಕ ಸಂಖ್ಯೆ
ದಿನಾಂಕ

ತಮ್ಮ ನಂಬುಗೆಯ,

M. Gopalakrishna

(ಎಂ.ಗೋಪಾಲಕೃಷ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಾರ್ವಜನಿಕ ಉದ್ದಿಮೆಗಳ ಇಲಾಖೆ.

# ಟಿಪ್ಪಣಿ

ಸರ್ಕಾರದ ಪತ್ರ ಸಂಖ್ಯೆ:ಸಾಲುಇ16 ಎ ಆರ್ ಯು 2019(ಭಾ),ದಿನಾಂಕ:27.08.2020. ರಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ನೀಡಿರುವ ಶಿಫಾರಸ್ಸುಗಳ ಕುರಿತು ಪರಿಶೀಲಿಸಿ, ಕೈಗೊಂಡ ಕ್ರಮದ ಬಗ್ಗೆ ಕೋರಲಾದ ವರದಿ.

1. ಕಂಪನಿಯ ಸ್ಥಗಿತ ಕಾಲದ ನಷ್ಟಗಳು,ಒಟ್ಟು ನಷ್ಟಗಳು ಕಂಪನಿಗೆ ಭಾರಿ ನಷ್ಟವನ್ನುಂಟು ಮಾಡುತ್ತಿದ್ದು ಇದನ್ನು ತಕ್ಷಣವೆ ಪರಿಹರಿಸಬೇಕಾಗಿರುತ್ತದೆ.

ಕ್ರಮ:

ಮೈಸೂರು ಸಕ್ಕರೆ ಕಂಪನಿಯ 2014–2015 ರ ಸಾಲಿನ ವಾರ್ಷಿಕ ಲೆಕ್ಕಪತ್ರ ಪೂರ್ಣಗೊಂಡಿದ್ದು ಶಾಸನಬದ್ದ ಲೆಕ್ಕಪರಿಶೋಧಕರ ಪರಿಶೀಲನೆಗೆ ಸಲ್ಲಿಸಲಾಗಿದೆ. 2015–16, 2016–17, 2017–18 ಮತ್ತು 2018–19ನೇ ಸಾಲಿನ ಲೆಕ್ಕಪತ್ರ ಪೂರ್ಣಗೊಳಿಸುವ ಪ್ರಗತಿಯಲ್ಲಿದೆ. 2013–2014 ನೇ ಸಾಲಿನ ವಾರ್ಷಿಕ ವರದಿಯಂತೆ ರೂ.46.72 ಕೋಟಿಗಳ ನಷ್ಟವನ್ನು ಹೊಂದಿರುತ್ತದೆ.

ಮೈಸೂರು ಸಕ್ಕರೆ ಕಂಪನಿಯು ಅನುಭವಿಸುತ್ತಿರುವ ನಷ್ಟವನ್ನು ಪರಿಹರಿಸುವ ನಿಟ್ಟಿನಲ್ಲಿ ಕಾರ್ಖಾನೆಯನ್ನು 2021–22 ನೇ ಸಾಲಿಗೆ ಸರ್ಕಾರದ ನಿರ್ದೇಶನದಂತೆ ಲೀಸ್ ಆಧಾರದ ಮೇಲೆ ಖಾಸಗಿಯವರಿಗೆ ನೀಡಿ ಕಾರ್ಖಾನೆಯನ್ನು ಪ್ರಾರಂಭಿಸಲು ಕ್ರಮವಹಿಸಲಾಗುತ್ತಿದೆ.

2. ಕಂಪನಿಯು ತನ್ನ ಕ್ರಷಿಂಗ್ ಕಾರ್ಯಾಚರಣೆಯನ್ನು ಜೂನ್ ತಿಂಗಳಲ್ಲಿ ಪ್ರಾರಂಭಿಸಬೇಕು, ಇದರಿಂದಾಗಿ ಕೃಷಿ ಮಾಡಿದ ಕಬ್ಬು 12 ತಿಂಗಳಿಗಿಂತ ಹೆಚ್ಚು ಕಾಲ ಕಟಾವಾಗದೇ ಉಳಿಯುವುದಿಲ್ಲ ಮತ್ತು ರೈತರು ಕೂಳೆ ಕಬ್ಬು ಬೆಳೆ ಹೊಂದುವುದರಿಂದ ಮುಂದಿನ ಬೆಳೆ ಬೆಳೆಯುವ ವೆಚ್ಚವನ್ನು ಕಡಿಮೆಯಾಗುವುದರಿಂದ ರೈತರಿಗೆ ಪ್ರಯೋಜನಕಾರಿಯಾಗುತ್ತದೆ ಮತ್ತು ಕಬ್ಬಿನಿಂದ ಉತ್ತಮ ಶೇಕಡಾ ಸಕ್ಕರೆ ಉತ್ಪಾದನೆ ದೊರೆಯುವುದರಿಂದ ಕಾರ್ಖಾನೆಯಗೆ ಪ್ರಯೋಜನಕಾರಿಯಾಗುತ್ತದೆ.

ಕ್ರಮ:

2021–22ನೇ ಸಾಲಿಗೆ ಕಂಪನಿಯು ತನ್ನ ಕ್ರಷಿಂಗ್ ಕಾರ್ಯಚರಣೆಯನ್ನು ಪ್ರಾರಂಭಮಾಡಲು ಸರ್ಕಾರದ ನಿರ್ದೇಶನದಂತೆ ಎಲ್.ಆರ್.ಓ.ಟಿ ಆಧಾರದ ಮೇಲೆ ಲೀಸ್ ನೀಡಲು ಕ್ರಮವಹಿಸುತ್ತಿದ್ದು, ಇದರಿಂದಾಗಿ ಕಬ್ಬು ಬೆಳೆದ ರೈತರಿಗೆ ಹಾಗೂ ಕಾರ್ಖಾನೆಯಲ್ಲಿ ಸಕ್ಕರೆ ಉತ್ಪಾದನೆಗೆ ಅನುಕುಲವಾಗುವಂತೆ ಕ್ರಮವಹಿಸಲಾಗುತ್ತದೆ.

3. ಸ್ಥಾವರ ಮತ್ತು ಯಂತ್ರೋಪಕರಣಗಳ ಸ್ಥಾಪಿತ ಸಾಮರ್ಥ್ಯದ ಕಳಪೆ ಕಡಿಮೆ ಬಳಕೆಯ ಕಬ್ಬು ಬೆಳೆ ಋತುವಿನ ಅವಧಿಯನ್ನು ಅನಗತ್ಯವಾಗಿ ವಿಸ್ತರಿಸುವುದಕ್ಕೆ ಕಾರಣವಾಗಿದ್ದು, ಸಕ್ಕರೆ ಉತ್ಪಾದನೆಯ ಶೇಕಡಾವಾರು ಕಳಪೆಯಾಗಿರುತ್ತದೆ. ಕ್ರಷಿಂಗ್ ಕಾರ್ಯಾಚರಣೆಯನ್ನು ಸಕಾಲದಲ್ಲಿ ಕೈಗೊಳ್ಳಲು ಕಂಪನಿಯ ತಕ್ಷಣವೇ ಸ್ಥಾವರ ಮತ್ತು ಯಂತ್ರೋಪಕರಣಗಳ ಸಂಪೂರ್ಣ / ಪ್ರಮುಖ ಕೂಲಂಕುಷ ಪರಿಶೀಲನೆಯತ್ತ ಗಮನ ಹರಿಸಬೇಕು. ಮೈಷುಗರ್‌ಗೆ ಸೇರಿದ ಪ್ರದೇಶಗಳಿಗೆ ಸೂಕ್ತವಾದ ವಿ.ಸಿ.ಎಫ್.517, ಎಂ–01, ಸಿ.62175 ಸುಧಾರಿತ ಅಧಿಕ ಇಳುವರಿ ವೈವಿಧ್ಯಗಳ ಬೀಜದ ಸಾಮಗ್ರಿಯನ್ನು ಕಬ್ಬು ಬೆಳಗಾರರಿಗೆ ತುಂಬಾ ಕಡಿಮೆ ಬೆಲೆಯಲ್ಲಿ ವಿತರಿಸುವುದರಿಂದ ಸಕ್ಕರೆ ಉತ್ಪಾದನೆಯ ಶೇಕಡಾವಾರು ಪ್ರಮಾಣವು ಜಾಸ್ತಿಯಾಗುತ್ತದೆ.

ಕ್ರಮ :

2021–22ನೇ ಸಾಲಿಗೆ ಕಬ್ಬು ನುರಿಸುವ ಕಾರ್ಯವನ್ನು ಸರ್ಕಾರದ ನಿರ್ದೇಶನದಂತೆ ಎಲ್.ಆರ್.ಓ.ಟಿ ಆಧಾರದ ಮೇಲೆ ಲೀಸ್ ನೀಡಲು ಕ್ರಮವಹಿಸುತ್ತಿದ್ದು, ಕಂಪನಿಯಲ್ಲಿರುವ ಸ್ಥಾವರ ಮತ್ತು ಯಂತ್ರೋಪಕರಣಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ಅಥವಾ ಹೆಚ್ಚಿಸುವ ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸಿ ಗುತ್ತಿಗೆದಾರರಿಗೆ ಕಾರ್ಖಾನೆಯನ್ನು ಪ್ರಾರಂಭ ಮಾಡುವಂತೆ ನೀಡಲು ಕ್ರಮವಹಿಸಲಾಗುತ್ತಿದೆ. ಮಂಡ್ಯ ಜಿಲ್ಲೆಯ ಕಾರ್ಖಾನೆಯ ವ್ಯಾಪ್ತಿಯಲ್ಲಿ ಬೆಳೆಯುವ ಕಬ್ಬಿನ ಲಭ್ಯತೆ ವಿವರಗಳನ್ನು ಗುತ್ತಿಗೆದಾರರಿಗೆ ನೀಡಲಾಗುವುದು.

4. ಗುತ್ತಿಗೆದಾರರ ಮೂಲಕ ಕಾರ್ಮಿಕರನ್ನು ತೊಡಗಿಸಿಕೊಳ್ಳುವ ಮತ್ತು ಅವಧಿ ಆಧಾರದ ಮೇಲೆ ಅವರ ಪಾವತಿಯನ್ನು ಮಾಡುವ ಪ್ರಸ್ತುತ ವ್ಯವಸ್ಥೆ ಪರಿಶೀಲಿಸಬಹುದು ಮತ್ತು ಉತ್ಪಾದನಾ ಆಧಾರದ ಮೇಲೆ ಹೊಸ ಪಾವತಿ ವ್ಯವಸ್ಥೆಯನ್ನು ಪರಿಗಣಿಸಬಹುದು.

ಕ್ರಮ :

2021–22ನೇ ಸಾಲಿಗೆ ಕಬ್ಬು ನುರಿಸುವ ಕಾರ್ಯವನ್ನು ಸರ್ಕಾರದ ನಿರ್ದೇಶನದಂತೆ ಎಲ್.ಆರ್.ಓ.ಟಿ ಆಧಾರದ ಮೇಲೆ ಲೀಸ್ ನೀಡಲು ಕ್ರಮವಹಿಸುತ್ತಿದ್ದು, ಸಂಬಂಧಪಟ್ಟ ನೌಕರರ ವೇತನ ಪಾವತಿ ಹಾಗೂ ರೈತರ ಕಬ್ಬಿನ ಬಿಲ್ ಪಾವತಿಯನ್ನು ನಿಗಧಿತ ಸಮಯದಲ್ಲಿ ಪಾವತಿ ಮಾಡುವಂತೆ ಗುತ್ತಿಗೆದಾರರಿಗೆ ಷರತ್ತನ್ನು ವಿಧಿಸಲಾಗುವುದು.

ಪ್ರಧಾನ ನಿರ್ವಾಹಕರು